ಚಂದ್ರಶೇಖರ ತಾಳ್ಯ ಚಿತ್ರದುರ್ಗದ ಹೊಳಲ್ಕೆರೆಯವರು. ತರ್ಕಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರು. ಗದ್ಯ, ಪದ್ಯ, ನಾಟಕ, ಅನುವಾದ, ತತ್ತ್ವಶಾಸ್ತ್ರ ಸೇರಿದಂತೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತೊಡಗಿಸಿಕೊಂಡವರು. 'ನನ್ನ ಕಣ್ಣಗಲಕ್ಕೆ', 'ಸಿಂಧೂ ನದಿಯ ದಂಡೆಯ ಮೇಲೆ', 'ಎಲ್ಲಿ ನವಿಲು ಹೇಳಿರೇ', 'ಸುಡುವ ಭೂಮಿ', 'ಕಾವಳದ ಸಂಜೆಯಲ್ಲಿ', 'ಮೌನ ಮಾತಿನ ಸದ್ದು' ಅವರ ಕವನ ಸಂಕಲನಗಳು.

ಕಡೆಗೇ ಗಮನ ಕೊಟ್ಟು ಮೀನಾಕ್ಷಿಯ ಕಂಡರೂ ಕಾಣದವನಂತೆ ನಟಿಸುವುದು ಮಾಡುತ್ತಿದ್ದ. ಅದ ಕಂಡ ಭದ್ರಪ್ಪನು 'ಲೇ ಶೇಕ್ರಪ್ಪ ಆತಾಯಿ ಬಂದು ಎಷ್ಟೊತ್ತಾತೋ, ಅದೇನು ಕೊಟ್ಟು ಕಳಿಸಬಾರದಾ?' ಅಂತ ಹೇಳಿದ ಮೇಲೂ ಆಕೆಯನ್ನು ಬೇಗಬೇಗನೆ ಕಳಿಸುತ್ತಿರಲಿಲ್ಲ. ಆಗೆಲ್ಲ ಭದ್ರಪ್ಪನೇ ಎದ್ದು 'ತಾಯಿ ಏನು ಬೇಕವ್ವ' ಅಂತ ಕೇಳಿ ಕಳಿಸಿಕೊಡುತ್ತಿದ್ದ. ಶೇಕ್ರಿ ಅಷ್ಟರಮಟ್ಟಿಗೆ ಆಕೆಯನ್ನು ಹಚ್ಚಿಕೊಂಡಿದ್ದ. ಆಕೆಯನ್ನು ಕೀಟ್ಲೆ ಮಾತಿನಿಂದ ಅದೂ ಇದೂ ಅಂದರೆ ಮೀನಾಕ್ಷಿಯೂ ಎದುರಾಡಿ ಸಿಡಿಮಿಡಿ ಅನ್ನುತ್ತಿದ್ದಳು. ಇದ ಕಂಡು ಅವನಿಗೆ ಅವಳು ತನ್ನಲ್ಲಿ ಮನಸ್ಸಿಟ್ಟಿರಬಹುದೇ ಅಂತಲೂ ಅಂದುಕೊಳ್ಳುತ್ತಿದ್ದ.



ಊರಿನ ಮಿಡ್ಲಿಸ್ಕೂಲ್ ತಂಕ ಓದಿದವಳು. ಜಾಣೆಯಲ್ಲದಿದ್ದರೂ ವ್ಯವಹಾರ ತಿಳಿದವಳು. ಓದಿನಲ್ಲಿ ಚುರುಕಾಗಿದ್ದರೂ ಮುಂದಕ್ಕೆ ಓದುವ ಅವಕಾಶವೇನೂ ಅವಳಿಗೆ ಬರುತ್ತಿಲಿಲ್ಲ. ಹಂಗೆ ನೋಡಿದರೆ ದೊಡ್ಡದೊಡ್ಡ ಮನೆ ಹೆಣ್ಣು ಮಕ್ಕಳೂ ಪರ ಊರಿಗೆ ಹೋಗಿ ಓದಲು ಮನೆಯವರು ಸುತಾರಾಂ ಒಪ್ಪುತ್ತಿರಲಿಲ್ಲ. ಮೀನಾಕ್ಷಿ ಮನೆಗೆಲಸದ ಜೊತೆ ಅಡಕೆ ಸುಗ್ಗಿಗೆ ಅವಳವ್ವ ಸುಭದ್ರಮ್ಮನ ಜೊತೆ ಅಡಕೆ ಸುಲಿಯಲು ಕೂಲಿ ಹೋಗುತ್ತಿದ್ದಳು. ಆಕೆ ಅಡಕೆ ಸುಲಿಯುವುದರಲ್ಲಿ ಎಕ್ಸ್‌ಪರ್ಟ್. ಎಲ್ಲ ಹೆಣ್ಣುಮಕ್ಕಳಿಗಿಂತ ತಾನೇ ಹೆಚ್ಚಿಗೆ ಸುಲಿದು ಹೆಚ್ಚು ಕೂಲಿ ಗಿಟ್ಟಿಸುತ್ತಿದ್ದಳು. ಅದ ಕಂಡ ಸುಭದ್ರಮ್ಮನಿಗೆ ತನ್ನ ಮಗಳ ಬಗ್ಗೆ ಅಭಿಮಾನ. ಆದರೆ ಮೊದಮೊದಲು ಸುಭದ್ರಮ್ಮಗೆ ಈ ಕೆಲಸಕ್ಕೆ ಮೀನಾಕ್ಷಿಯನ್ನು ತೊಡಗಿಸುವುದು ಇಷ್ಟವಿರಲಿಲ್ಲ. 'ನಾನೊಬ್ಬು ಹೋಗ್ತೀನಲ್ಲಾ ಸಾಕು, ನೀನ್ಯಾಕೆ ಆ ಜಾಗಕ್ಕೆ' ಎಂದು ಎಷ್ಟು ಹೇಳಿದರೂ ಮೀನಾಕ್ಷಿ ಅವಳವ್ವನ ಮನ ಒಲಿಸಿದ್ದಳು. ಆದರೂ ಸುಭದ್ರಮ್ಮ ಮನಸಾರೆ ಒಪ್ಪದಿದ್ದರೂ ಮನೆಯ ಪರಿಸ್ಥಿತಿ ಬಹು ನಾಜೂಕಿನದಾಗಿತ್ತು. ಇರುವ ಒಬ್ಬ ಮಗನನ್ನಾದರೂ ಚೆನ್ನಾಗಿ ಓದಿಸಿ ಮುಂದೆ ತರಬೇಕೆಂಬುದು ಅವಳ ಗುರಿಯಾಗಿತ್ತು. ಮೀನಾಕ್ಷಿಗೆ ಇದೆಲ್ಲವೂ ತಿಳಿದಿತ್ತು. ಅದಕ್ಕೇ ಅವಳು ಅವಳವ್ವನ ಹೆಗಲಿಗೆ ಹೆಗಲಾಗಿ ಅಪ್ಪನ ನೆಚ್ಚಿನ ಮಗಳಾಗಿದ್ದಳು.

ಅಡಕೆ ಸುಗ್ಗಿ ಬಂತೆಂದರೆ ಬಡ ಹೆಣ್ಣುಮಕ್ಕಳಿಗೆ ಸಡಗರವೋ ಸಡಗರ. ಅವರು ಮನೆಯಿಂದ ಹೊರಕ್ಕೆ ಬಂದು ಹಕ್ಕಿಗಳಂತೆ ಹಾರಾಡುವುದು ಒಂದಾದರೆ, ಒಂದಷ್ಟು ಕಾಸೂ ಸಿಕ್ಕಿ ಅವರ ಮನೆವಾಳ್ತನಕ್ಕೆ ನೆರವೂ ಸಿಕ್ಕುವುದು ಮತ್ತೊಂದು. ಆದರೆ, ಇನ್ನೊಂದೆಂದರೆ ಆಗ ತಾನೇ ಹಳ್ಳಿಗೆ ಬಂದಿದ್ದ ಪಾಂಡ್ಸ್ ಪೌಡರಿನ ಪರಿಮಳ.

ಅದಕ್ಕಾಗಿ ದುಡ್ಡು ಬೇಕೇ ಬೇಕಾಗಿತ್ತು. ಗಂಡಂದಿರು ಇದಕ್ಕೆಲ್ಲಾ ಕೇರು ಮಾಡುವವರಲ್ಲ. ಅದಕ್ಕೇ ಅವರ ಹಂಗಿಲ್ಲದೆ ತಾವೇ ಅದನ್ನು ಗುಟ್ಟಾಗಿ ಭದ್ರಪ್ಪನ ಅಂಗಡಿಯಿಂದ ಕೊಳ್ಳುವುದು ಸಾಧ್ಯವಾಗುತ್ತಿತ್ತು. ಈ ಹೆಣ್ಣುಮಕ್ಕಳ ಗುಂಪಿಗೆ ಅಡುಗೆ ಬಸಜ್ಜನು ಸಾರಥಿ. ಮದುವೆ ಶುಭ ಕಾರ್ಯಕ್ಕೆ ಅಡುಗೆ ಮಾಡುವುದರಲ್ಲಿ ನಿಸ್ಸೀಮನಾದ ಬಸಜ್ಜ ಎಲ್ಲರ ಮೆಚ್ಚುಗೆ ಗಳಿಸಿದ್ದ. ಅವಜ್ಜನ ಮಾತು ಅಷ್ಟೇ